ಸಿತಾರ್‌ಗಳನ್ನೂ ಕಲಿಯುತ್ತಾ ನನ್ನ ವ್ಯಕ್ತಿತ್ವವೇ ಬೇರೆಯ ಸ್ವರೂಪವನ್ನ ಪಡೆಯುತ್ತಾ ಹೋಯ್ತು.

ನಾನು ಕಾಲೇಜು ಹಾಸ್ಟೆಲ್‌ನಲ್ಲಿದ್ದಾಗ ಸರೋಜಿನಿ ಶಿಂತ್ರಿ ಅಂತ ಹಿರಿಯ ಪ್ರಾಧ್ಯಾಪಿಕೆ ನಮ್ಮ ವಾರ್ಡನ್ ಆಗಿದ್ರು. ಡಾಕ್ಟರೇಟ್ ಪಡೆದ ಮೊದಲ ಲಿಂಗಾಯಿತ ಮಹಿಳೆ, ಮೊದಲ ಎನ್‌ಸಿಸಿ ಆಫೀಸರ್ – ಹೀಗೆ ಅನೇಕ ಮೊದಲುಗಳ ವಿಶಿಷ್ಟ ಮಹಿಳೆ ಅವರು. ಮದುವೆಯಾಗದೇ ಉಳಿದು ಸಾಂಪ್ರದಾಯಿಕ ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ಬಾಳಿದವರು. ಅವರು ಆ ಕಾಲದಲ್ಲಿ ನನ್ನನ್ನು ಗಾಢವಾಗಿ ಪ್ರಭಾವಿಸಿದ್ದರು. ಕಾಲೇಜಿನಲ್ಲೂ ನನಗೆ ಅನೇಕ ಗೆಳೆಯರು ಗೆಳತಿಯರು ಇದ್ದರು. ಗೆಳೆತನ ನಿಜವಾದ ಅರ್ಥದಲ್ಲಿ ವ್ಯಕ್ತಿಯ ಜೀವನವನ್ನು ಶ್ರೀಮಂತಗೊಳಿಸುತ್ತೆ ಅನ್ನೋದು ನನ್ನ ನಂಬಿಕೆ.

**ಆಶಾ:** ನಿಗಿ ನಿಗಿ ಕೆಂಡದಂತಹ ಕೃತಿ 'ಮುಳ್ಳುಗಳು' ಬರೆದಾಗ ನಿಮಗೆ ಸಿಕ್ಕ ಪ್ರತಿಕ್ರಿಯೆಗಳು?

**ವೀಣಾ:** ಐವತ್ತು ವರ್ಷಗಳ ಹಿಂದೆ 'ಮುಳ್ಳುಗಳು' ಪ್ರಕಟವಾದಾಗ, ಆಗ ಉಚ್ಛ್ರಾಯ ಕಾಲದಲ್ಲಿದ್ದ ನವ್ಯ ಸಾಹಿತ್ಯದ ಅಧ್ವರ್ಯುಗಳಾಗಿದ್ದ ಅಡಿಗರು, ಅನಂತಮೂರ್ತಿ, ಲಂಕೇಶ್, ಸುಮತೀಂದ್ರ ನಾಡಿಗ, ಗಿರಡ್ಡಿ ಹಾಗೂ ಮುಖ್ಯವಾಗಿ ನನ್ನ ಗುರುಗಳಾಗಿದ್ದ ಶಾಂತಿನಾಥ ದೇಸಾಯಿಯವರು ಇವರೆಲ್ಲರಿಂದ ನನಗೆ ತುಂಬಾ ಪ್ರೋತ್ಸಾಹ ಸಿಕ್ಕಿತು. ಆಗಿನ ನನ್ನ ಸಹ ಲೇಖಕರಾಗಿದ್ದ ಶ್ರೀಕೃಷ್ಣ ಆಲನಹಳ್ಳಿ, ಎಚ್.ಎಸ್. ರಾಘವೇಂದ್ರರಾವ್ ಮೊದಲಾದವರಿಂದ ತುಂಬಾ ಬೆಂಬಲ ಸಿಕ್ಕಿತು ನನಗೆ. ಹೊಸ ಪೀಳಿಗೆಯ ಓದುಗರೂ ಈ ಹೊಸಮಾರ್ಗದ ಕೃತಿಯನ್ನ ಅಪಾರವಾಗಿ ಮೆಚ್ಚಿಕೊಂಡರು. ಸಾಂಪ್ರದಾಯಿಕ ಸಮಾಜದ ಒಂದು ವರ್ಗ ಮಾತ್ರ ನನಗೆ ಬಹಿಷ್ಕಾರವನ್ನೇ ಹಾಕಿತು. 'ಈ ಹೆಣ್ಣು ನಾಚಿಕೆಯಿಲ್ಲದವಳು' ಅಂತ ಸಾರಿ ಬಿಟ್ಟಿತು. ಹಿರಿಯ ಹಿತೈಷಿಗಳು ನನ್ನನ್ನ ದೂರ ಮಾಡಿದ್ರು. ನನ್ನ ಬೆನ್ನ ಹಿಂದೆ ಅಪಶಬ್ದ–ನಿಂದೆ–ಟೀಕೆ ಸದಾ ನಡೆಯುತ್ತಲೇ ಇದ್ದವು. ವಿ.ಎಂ. ಇನಾಂದಾರರು ಒಂದು ತೀರ ಕಟುವಾದ ವಿಮರ್ಶೆಯನ್ನು 'ಪ್ರಜಾವಾಣಿ'ಯಲ್ಲಿ ಬರೆದು 'ಇವು ಕತೆಗಳೇ ಅಲ್ಲ' ಅಂತ ಹೇಳಿಬಿಟ್ಟರು. ಆಗ ಹುಬ್ಬಳ್ಳಿಯ ಕೆಎಂಸಿಯಲ್ಲಿ ಡಾಕ್ಟರರಾಗಿದ್ದ, ನನ್ನ ಆತ್ಮೀಯರೂ ಆಗಿದ್ದ ಡಾ. ಎಚ್.ಸಿ. ವಿಷ್ಣುಮೂರ್ತಿಯವರು ಕೂಡಲೇ ಒಂದು ವಿಚಾರಸಂಕಿರಣ ಏರ್ಪಡಿಸಿ ಹಲವು ಸಮಾನಮನಸ್ಕರನ್ನ ಕೂಡಿಸಿ, ಇನಾಂದಾರರ ಹೇಳಿಕೆಯನ್ನ ತೀವ್ರವಾಗಿ ಖಂಡಿಸಿದರು. ಈ ಎಲ್ಲ ಬಗೆಯ ಪ್ರತಿಕ್ರಿಯೆಗಳನ್ನ ಸಮನಾಗಿ ಎಂಜಾಯ್ ಮಾಡುವ ಮನೋಭಾವವನ್ನು ನಾನು ಬೆಳೆಸಿಕೊಂಡಿದ್ದರಿಂದ ನನಗೆ ತೀವ್ರ ಪ್ರತಿಕ್ರಿಯೆಗಳಿಂದ ಆಗ ಅಥವಾ ಮುಂದೆಯೂ ಆಘಾತದಂತಹದ್ದೇನೂ ಆಗಲಿಲ್ಲ.

**ಆಶಾ:** ಇದನ್ನೇ ಮುಂದುವರೆಸುವುದಾದರೆ, ನಿಮ್ಮ ಬರವಣಿಗೆಯನ್ನು ಆರಂಭಿಸುವಾಗ ನಿಮ್ಮ ಗ್ರಹಿಕೆಯಲ್ಲಿದ್ದ 'ಹೊಸ ಹೆಣ್ಣೆ'ನ ಚಿತ್ರ ಯಾವುದು?

**ವೀಣಾ:** ನಾನು ಆಗಲೇ ಹೇಳಿದಂತೆ ಆರನೆಯ ವಯಸ್ಸಿನಲ್ಲಿ ನಾನು ನನ್ನ ಮೊದಲ ಕತೆ ಬರೆದೆ. ಅದರಲ್ಲಿ ನಾಯಕಿ ಶೂರಳಾದ ಒಬ್ಬ ರಾಜಕುಮಾರಿ. ಆಕೆ ಪ್ರೀತಿಸಿದ ರಾಜಕುಮಾರನನ್ನ ಒಬ್ಬ ರಾಕ್ಷಸ ಹೊತ್ತೊಯ್ದು ಏಳು ಸುತ್ತಿನ ಕೋಟೆಯಲ್ಲಿ ಬಂಧಿಸಿ ಇಟ್ಟಿರ್ತಾನೆ. ಈ ರಾಜಕುಮಾರಿ ಕುದುರೆಯೇರಿ ಖಡ್ಗ ಹಿಡಿದು ಹೋರಾಡಿ ಅವನನ್ನ ಕೊಂದು ರಾಜಕುಮಾರನನ್ನ ಬಿಡಿಸಿಕೊಂಡು ಬರ್ತಾಳೆ. ಸ್ತ್ರೀವಾದವಂತೂ ಆಗಿನ್ನೂ ಪರಿಚಯವಿರಲಿಲ್ಲ. ಬಹುಶಃ ನನ್ನ ಗ್ರಹಿಕೆಯ 'ಹೊಸ ಹೆಣ್ಣು' ಆ ಮೊದಲ ಕತೆಯ ರಾಜಕುಮಾರಿಯೇ ಆಗಿದ್ದಳು. ಗಂಡಸಿಗೆ ಸಮಾನವಾಗಿ ಅಲ್ಲ, ಗಂಡಸನ್ನು ಮೀರಿ ತನ್ನ ಶಕ್ತಿಸಾಮರ್ಥ್ಯ ಮೆರೆಯಬಲ್ಲ ಹೆಣ್ಣು.

**ಆಶಾ:** ಹೆಣ್ಣಿನ ಬದಲಾಗುತ್ತಿರುವ, ಬದಲಾಗಬೇಕಾದ ಮನೋವಿನ್ಯಾಸವನ್ನು